# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮೀನುಗಾರರು ಶೇ.2 ರ ಬಡ್ಡಿ ದರದಲ್ಲಿ ವಾಣಿಜ್ಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ 2017-18 ಮತ್ತು 2018-19 ನೇ ಸಾಲುಗಳಲ್ಲಿ ಹಾಗೂ ಶೂನ್ಯ ಬಡ್ಡಿ ದರದಲ್ಲಿ 2018-19 ನೇ ಸಾಲಿನಲ್ಲಿ ಪಡೆದ ಸಾಲ ಮರು ಪಾವತಿಸಲು ಬಾಕಿ ಇರುವ ಮೊತ್ತ ಮನ್ನಾ ಮಾಡುವ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸುವ ಕುರಿತು.

ಓದಲಾಗಿದೆ:
1) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 147 ಮೀಇಯೋ 2018, ದಿನಾಂಕ: 30-07-2019.
2) ಸರ್ಕಾರದ ಆದೇಶ ಸಂಖ್ಯೆ ಪಸಂಮೀ 147 ಮೀಇಯೋ 2018, ದಿನಾಂಕ: 07-01-2020.
3) ಸರ್ಕಾರದ ಆದೇಶ ಸಂಖ್ಯೆ ಪಸಂಮೀ 147 ಮೀಇಯೋ 2018 (ಭಾಗ 2) ದಿನಾಂಕ: 02-03-2020.
4) ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆ ಸಂಖ್ಯೆ: ಮೀನಿ:04: ಲೋನ್ 2019-20 ದಿನಾಂಕ: 14-12-2020.

**********

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರರು ಶೇ.2ರ ಬಡ್ಡಿದರದಲ್ಲಿ ವಾಣಿಜ್ಯ ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳಿಂದ 2017-18 ಮತ್ತು 2018-19 ನೇ ಸಾಲುಗಳಲ್ಲಿ ಪಡೆದ ರೂ. 50,000/- ರವರೆಗಿನ ಸಾಲ ಮರುಪಾವತಿಸಲು ಬಾಕಿ ಇರುವ ಒಟ್ಟು ಮೊತ್ತ ರೂ. 60.584 ಕೋಟಿ (ಅರವತ್ತು ಕೋಟಿ ಐವತ್ತೆಂಟು ಲಕ್ಷದ ನಲವತ್ತು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಮನ್ನಾ ಮಾಡಿ ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ 2018-19 ನೇ ಸಾಲಿನಲ್ಲಿ ಶೂನ್ಯ ಬಡ್ಡಿದರ ಯೋಜನೆಯಡಿ ಸಾಲ ಪಡೆದ ಮೀನುಗಾರರಿಗೂ ಮೇಲಿನ ಸಾಲಮನ್ನಾದ ಪ್ರಯೋಜನವು ಅನ್ವಯವಾಗುವಂತೆ ಪರಿಷ್ಕೃತ ಆದೇಶ ಹೊರಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ ಅವಧಿ ಮೀರಿದ ಸುಸ್ತಿ ಸಾಲಗಳನ್ನು ಸಹ ಈ ಸಾಲ ಮನ್ನಾ ಯೋಜನಾ ವ್ಯಾಪ್ತಿಗೆ ತಂದು ಈ ಸೌಲಭ್ಯವನ್ನು ಆಧಾರ್ ಕಾರ್ಡ್ ಹೊಂದಿರುವ ಎಲ್ಲಾ ಫಲಾನುಭವಿಗಳಿಗೂ ವಿಸ್ತರಿಸಲಾಗಿದೆ.

Kamakshi U.A

-2-

ಇದರಂತೆ ಭೂಮಿಕೋಶವು ಈ ಯೋಜನೆಯ ಅನುಷ್ಠಾನಕ್ಕಾಗಿ ಸಿದ್ಧಪಡಿಸಿದ ತಂತ್ರಾಂಶದಲ್ಲಿ ಎಲ್ಲಾ ಅರ್ಹ ಫಲಾನುಭವಿಗಳ ದತ್ತಾಂಶವನ್ನು ದಾಖಲಿಸಿ ಅಗತ್ಯ ಪರಿಶೀಲನೆಗಳೊಂದಿಗೆ ಅಂತಿಮ ಹಸಿರು ಪಟ್ಟಿ ಸಿದ್ಧಪಡಿಸಲಾಗಿರುತ್ತದೆ. ಈ ಪಟ್ಟಿಯನುಸಾರ ಯೋಜನೆ ಅನುಷ್ಠಾನಕ್ಕಾಗಿ ರೂ. 49.00 ಕೋಟಿಗಳನ್ನು ಮೀನುಗಾರಿಕೆ ಇಲಾಖೆ ನಿರ್ದೇಶಕರ ಉಳಿತಾಯ ಖಾತೆಗೆ ಆರ್ಥಿಕ ಇಲಾಖೆಯಿಂದ ವರ್ಗಾವಣೆ ಮಾಡಲಾಗಿರುತ್ತದೆ. ಈ ರೀತಿ ಬಿಡುಗಡೆಗೊಂಡ ಹಣವನ್ನು ಫಲಾನುಭವಿಗಳ ಸಾಲ ಖಾತೆಗೆ NEFT/RTGS ಮೂಲಕ ವರ್ಗಾವಣೆ ಮಾಡಲು ಕ್ರಮ ವಹಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ಸಾಲಮನ್ನಾ ಯೋಜನೆ ಪ್ರಕ್ರಿಯೆ ಪೂರ್ಣಗೊಳಿಸಲು ಅನುವಾಗುವಂತೆ ಹೆಚ್ಚುವರಿ ಅಂಶಗಳನ್ನೊಳಗೊಂಡ ಸರಕಾರದ ಆದೇಶ ಹೊರಡಿಸಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ ಮೇಲಿನಂತೆ ಬಿಡುಗಡೆಯಾದ ರೂ. 49.00 ಕೋಟಿಗಳ ಪೈಕಿ ಅಂತಿಮ ಹಸಿರು ಪಟ್ಟಿಯಲ್ಲಿನ 15,099 ನಮೂದುಗಳಿಗೆ ಒಟ್ಟು ರೂ.30,73,33,159/-ಗಳನ್ನು ಯಶಸ್ವಿಯಾಗಿ ವರ್ಗಾವಣೆ ಮಾಡಲಾಗಿದೆ ಎಂದು ತಿಳಿಸಿರು ತ್ತಾರೆ. ಇನ್ನು 7,75,76,589/- ರೂಪಾಯಿಗಳು ವರ್ಗಾವಣೆಯಾಗಲು ಬಾಕಿ ಇರುತ್ತದೆ.

ತಪ್ಪಾಗಿ ನಮೂದಾಗಿರುವ ಸಾಲಖಾತೆ ಸಂಖ್ಯೆಗಳು, ಸಾಲ ಖಾತೆಗಳು ಮುಕ್ತಾಯಗೊಂಡಿರುವ ಸಂದರ್ಭದಲ್ಲಿ ಮುಕ್ತಾಯಗೊಂಡ ದಿನಾಂಕ, ಪರ್ಯಾಯ ಖಾತೆ ಸಂಖ್ಯೆ ಮತ್ತು ಇತರೆ ಕಾರಣಗಳನ್ನು ನಮೂದಿಸಲು ಅವಕಾಶವಿಲ್ಲದಿರುವುದು ಹಾಗೂ ಇತರೆ ಕಾರಣಗಳನ್ನು ನಮೂದಿಸಲು ಅವಕಾಶವಿಲ್ಲದಿರುವ ಕಾರಣ ಹಣ ವರ್ಗಾವಣೆಯಾಗಲು ಬಾಕಿ ಇರುತ್ತದೆ ಎಂದು ವಿವರಿಸಿರುತ್ತಾರೆ. ಆಧಾರ್ ದೃಢೀಕೃತಗೊಳ್ಳದ ಆದರೆ ಇನ್ನಿತರ ನಿಯಮಗಳನುಸಾರ ಸಾಲಮನ್ನಾ ಪ್ರಯೋಜನ ಪಡೆಯಲು ಅರ್ಹರಿರುವ ಫಲಾನುಭವಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಿ ಪರಿಶೀಲಿಸುವ ಅವಶ್ಯಕತೆ ಇರುತ್ತದೆ ಎಂದು ಸಹ ವಿವರಿಸಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ ಪಸಂಮೀ 147 ಮೀಇಯೋ 2018, ಬೆಂಗಳೂರು ದಿನಾಂಕ: 08/01/2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸದರಿ ಯೋಜನೆಯ ಅನುಷ್ಠಾನವನ್ನು ನಿಯಮಾನುಸಾರ ಪೂರ್ಣಗೊಳಿಸುವ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಕ್ರಮವಹಿಸಲು ಆದೇಶಿಸಿದೆ.

1) ಆಧಾರ್ ದೃಢೀಕೃತಗೊಂಡು ಆಧಾರ್ ಮತ್ತು ಖಾತೆಯಲ್ಲಿರುವ ಹೆಸರು ತಾಳೆಯಾಗದೇ, ಆದರೆ ಇನ್ನಿತರ ನಿಯಮಗಳನುಸಾರ ಸಾಲಮನ್ನಾ ಪ್ರಯೋಜನ ಪಡೆಯಲು ಅರ್ಹರಿರುವ ಫಲಾನುಭವಿಗಳ ಪಟ್ಟಿಯನ್ನು ಪ್ರತ್ಯೇಕವಾಗಿ ಪ್ರಕಟಿಸಿ, ಫಲಾನುಭವಿಗಳಿಂದ ನೋಟರೀಕರಿಸಿದ ದೃಢೀಕರಣ ಪತ್ರ ಪಡೆದು ಪರಿಶೀಲಿಸಿ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಅನುಮೋದನೆಯಾದ ಫಲಾನುಭವಿಗಳಿಗೆ ಭೂಮಿಕೋಶದ ತಂತ್ರಾಂಶದ ಮೂಲಕ ಸಾಲಮನ್ನಾ ಮಾಡಲು ಕ್ರಮವಹಿಸತಕ್ಕದ್ದು.

Kamakshi U.A.

2) ಸಾಲ ಮನ್ನಾ ಪ್ರಯೋಜನ ಪಡೆಯಲು ಅರ್ಹತೆ ಇದ್ದಾಗ್ಯೂ ಸಾಲಮನ್ನಾ ಮೊತ್ತ ಪಾವತಿಯಾಗದೇ ಹಿಂದಿರುಗಿದ ಫಲಾನುಭವಿಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳಂತೆ ಕ್ರಮವಹಿಸತಕ್ಕದ್ದು.

a. ತಪ್ಪಾಗಿ ನಮೂದಾಗಿರುವ ಸಾಲ ಖಾತೆಯ ಸಂಖ್ಯೆಗಳನ್ನು ಸರಿಪಡಿಸಲು ಸಂಬಂಧಿಸಿದ ಬ್ಯಾಂಕ್ ಶಾಖೆಯ ಮ್ಯಾನೇಜರ್ ಗಳಿಗೆ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸುವುದು ಮತ್ತು ಪಾವತಿಗಾಗಿ ಸರಿಪಡಿಸಲಾದ ಪಟ್ಟಿಯನ್ವಯ ಸಾಲಮನ್ನಾ ಮೊತ್ತವನ್ನು ವರ್ಗಾಯಿಸಲು ಕ್ರಮವಹಿಸುವುದು.

b. ದಿನಾಂಕ:31-03-2019 ರ ನಂತರ ಸಾಲದ ಖಾತೆಗಳಿಗೆ ಫಲಾನುಭವಿಗಳು ಹಣ ಪಾವತಿಸಿ ಸಾಲದ ಖಾತೆಯನ್ನು ಮುಕ್ತಾಯಗೊಳಿಸಿದ್ದಲ್ಲಿ ಅಂತಹ ಸಾಲದ ಖಾತೆಗಳಿಗೆ ಬದಲಾಗಿ ಸದರಿ ಗುಂಪು ಸಾಲ ಪಡೆದಿರುವ ಫಲಾನುಭವಿಗಳ ಗುಂಪು ಉಳಿತಾಯ ಖಾತೆಗೆ ಅಥವಾ ವೈಯಕ್ತಿಕ ಸಾಲ ಪಡೆದ ಫಲಾನುಭವಿಗಳಿಗೆ ಅವರ ವೈಯಕ್ತಿಕ ಉಳಿತಾಯ ಖಾತೆಗೆ ಸಾಲಮನ್ನಾ ಮೊತ್ತವನ್ನು ಮರುಪಾವತಿಸಲು ಕ್ರಮವಹಿಸುವುದು.

c. ಸಾಲ ಖಾತೆಗಳು ಮುಕ್ತಾಯಗೊಂಡಿರುವ ಸಂದರ್ಭದಲ್ಲಿ ಮುಕ್ತಾಯ ಗೊಂಡ ದಿನಾಂಕ, ಪರ್ಯಾಯ ಖಾತೆ ಸಂಖ್ಯೆ ಮತ್ತು ಕಾರಣಗಳನ್ನು ನಮೂದಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸುವುದು ಮತ್ತು ನಿಯಮಾನುಸಾರ ಅರ್ಹರಿರುವ ಫಲಾನುಭವಿಗಳು/ಗುಂಪುಗಳ ಖಾತೆಗಳಿಗೆ ವರ್ಗಾಯಿಸಲು ಕ್ರಮವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Kamakshi U.A. 8/1/2021
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.

-4-

3) ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನಸೌಧ, ಬೆಂಗಳೂರು (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ 465/2019)
4) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
5) ನಿರ್ದೇಶಕರು (ಪಿಎಫ್‌ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
6) ಸಂಬಂಧಪಟ್ಟ ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಸಮಿತಿಯ ಎಲ್ಲಾ ಸದಸ್ಯರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
8) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
10) ಮಾನ್ಯ ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚುವರಿ ಪ್ರತಿಗಳು.